ಕ್ರಮ ಸಂ.	ಒತ್ತುವರಿದಾರರ ಹೆಸರು
೧೩	ಕಮೀಷನರ್. ಬಿ.ಡಿ.ಎ
೧೪	ರಾಮಸ್ವಾಮಿ ಬಿನ್ ಕೃಷ್ಣಪ್ಪ
೧೫	ಶಾರದಮ್ಮ ಕೋಂ ವಿಶ್ವನಾಥಗೌಡ
೧೬	ಕಮೀಷನರ್. ಬಿ.ಡಿ.ಎ
೧೭	ಶ್ರೀನಿವಾಸ ಬಿನ್ ಲೇಟ್ ನಾಗಪ್ಪ
೧೮	ಶಂಕರಪ್ಪ ಬಿನ್ ಲೇಟ್ ನಾಗಪ್ಪ
೧೯	ಹನುಮಯ್ಯ ಬಿನ್ ಲೇಟ್ ಪೂಜಪ್ಪ
೨೦	ಗೋಪಾಲನ್ ಎಂಟರ್ ಪ್ರೈಸಸ್
೨೧	ಶಂಕರಪ್ಪ ಬಿನ್ ಎಂ. ಕೃಷ್ಣಪ್ಪ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೯೫ (೨೩೮೨)

ಸದಸ್ಯರ ಹೆಸರು : ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)

ಉತ್ತರಿಸುವವರು : ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಪ್ರಶ್ನೆ

ಅ) ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರ ಜಿಲ್ಲೆಯು ಸೇರಿದಂತೆ ರಾಜ್ಯಾದ್ಯಂತ ಉಪ ನೋಂದಣಾಧಿಕಾರಿಗಳ ಕಛೇರಿಯಿಂದ ಸರ್ಕಾರಕ್ಕೆ ಬರುವ ಆದಾಯವೆಷ್ಟು ;

ಆ) ಚಾಮರಾಜನಗರ ಜಿಲ್ಲೆಯ ಉಪ ನೋಂದಾವಣಿ ಕಛೇರಿಯಿಂದ ಎಷ್ಟು ಆದಾಯ ಬರುತ್ತದೆ ;

ಇ) ಕಂದಾಯ ನಿವೇಶನಗಳ ನೋಂದಣಿಯನ್ನು ತಡೆಯಿಡಿಯಲು ಸರ್ಕಾರದ ಉದ್ದೇಶವೇನು ;

ಈ) ಪುನಃ ಕಂದಾಯ ನಿವೇಶನಗಳನ್ನು ನೋಂದಣಿ ಮಾಡುವುದು ಯಾವಾಗ ;

ಉ) ಬೆಂಗಳೂರು ನಗರದ ಯಾವ ಯಾವ ಸ್ಥಳಗಳಲ್ಲಿ ಕಂದಾಯ ನಿವೇಶನಗಳಿವೆ ?

ಉತ್ತರ

ಅ) ಚಾಮರಾಜನಗರ ಜಿಲ್ಲೆಯು ಸೇರಿದಂತೆ ರಾಜ್ಯದಾದ್ಯಂತ ೨೦೦೬–೦೭ನೇ ಫೆಬ್ರವರಿ ಅಂತ್ಯಕ್ಕೆ ಸರ್ಕಾರಕ್ಕೆ ಒಟ್ಟು ರೂ.೩೦೪.೪೫ ಕೋಟಿ ರಾಜಸ್ವ ಸಂಗ್ರಹಣೆಯಾಗಿರುತ್ತದೆ.

ಆ) ಚಾಮರಾಜನಗರ ಉಪ ನೋಂದಣಿ ಕಛೇರಿಯಿಂದ ೨೦೦೭ನೇ ಸಾಲಿನ ಫೆಬ್ರವರಿ ಅಂತ್ಯದವರೆಗೆ ಒಟ್ಟು ರೂ. ೬.೮೬ಕೋಟಿ ಆದಾಯ ಸಂಗ್ರಹವಾಗಿರುತ್ತದೆ.

ಇ) ಕಂದಾಯ ನಿವೇಶನಗಳ ನೋಂದಣಿಯನ್ನು ತಡೆಯಿಡಿಯಲಾಗಿರುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿ.ಬಿ.ಎಂ.ಪಿ) / ಬೆಂಗಳೂರು ಮೆಟ್ರೋಪಾಲಿಟನ್ ರೀಜನಲ್ ಡೆವಲಪ್ ಮೆಂಟ್ ಅಥಾರಿಟಿ ಪ್ರದೇಶಗಳಲ್ಲಿ ಕಂದಾಯ ನಿವೇಶನಗಳಿವೆ.